ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೬ನೇ ಜುಲೈ ೧೯೯೦, ಆಷಾಢ ೧೫, ೧೯೧೨ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯ ಘಂಟೆ ೨೦ ನಿಮಿಷಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಕೋಡರ್ಸ್‌ಗಳ ಮತ್ತು ಆಪರೇಟರ್ಸ್‌ಗಳ ಸೇವೆಯನ್ನು ಖಾಯಂಗೊಳಿಸುವುದು.

೧೪೧೨ ಶ್ರೀ ರಾಮಲಿಂಗರೆಡ್ಡಿ (ಜಯನಗರ) ಶ್ರೀ ಎಂ. ರೇವಣ್ಣ (ಮಾಗಡಿ).— ಮಾನ್ಯ ಆರ್ಥಿಕ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ದಿನಾಂಕ ೧೪-೬-೮೮ರಂದು ವಿಧಾನಸಭೆಯಲ್ಲಿ ಅಂದಿನ ಮುಖ್ಯ ಮಂತ್ರಿಗಳು ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ಡೇಟಾ ಎಂಟ್ರಿ ಆಪರೇಟರ್ಸ್ ಮತ್ತು ಕೋಡರ್ಸ್‌ಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ ಪೂರ್ಣಗೊಂಡ ಬಳಿಕ ಸಕ್ರಮಗೊಳಿಸಲಾಗುವುದೆಂಬ ಭರವಸೆ ನೈಜವೇ ?

(ಆ) ಹಾಗಾದರೆ ಆಪರೇಟರ್ ಹಾಗೂ ಕೋಡರ್‌ಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ ಪೂರ್ಣಗೊಂಡಿದೆಯೇ ಹಾಗೂ ಸಕ್ರಮಗೊಳಿಸಲಾಗಿದೆಯೇ ?

(ಇ) ಇಲ್ಲವಾದರೆ, ವ್ಯಥಾ ತಡವಾಗಲು ಕಾರಣವೇನು ?

(ಈ) ಇದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಎಂ. ರಾಜಶೇಖರಮೂರ್ತಿ(ಆರ್ಥಿಕ ಮತ್ತು ಅಬಕಾರಿ ಸಚಿವರು).—

(ಅ) ಹೌದು

(ಆ) ವೃಂದ ಮತ್ತು ನೇಮಕಾತಿ ನಿಯಮಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಈ ನಿಯಮಗಳನ್ನು ಅಂತಿಮಗೊಳಿಸಿದ ನಂತರ ಕೋಡರ್ಸ್ ಮತ್ತು ಡಾಟಾ ಎಂಟ್ರಿ ಆಪರೇಟರ್ಸ್‌ಗಳ ಸೇವೆಯನ್ನು ಸಕ್ರಮೀಕರಿಸಲು ಪರಿಶೀಲಿಸಲಾಗುವುದು.

(ಇ) ಉದ್ಭವಿಸುವುದಿಲ್ಲ.

(ಈ) ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗರೆಡ್ಡಿ.—ಮಾನ್ಯ ಸಭಾಧ್ಯಕ್ಷರೆ, ೧೯೮೫-೮೬ರಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಡೇಟಾ ಎಂಟ್ರಿ ಆಪರೇಟರ್ಸ್ ಮತ್ತು ಕೋಡರ್ಸ್‌ನ್ನು ಸುಮಾರು ೯೦-೯೫ ಜನ ನೇಮಕ ಮಾಡಿಕೊಂಡರು. ೧೯೮೫ರಲ್ಲಿ ನೇಮಕ ಮಾಡಿಕೊಂಡವರನ್ನು ಸುಮಾರು ೫೦೦-೬೦೦ ರೂಪಾಯಿಗಳ ವೇತನದ ದಿನಗೂಲಿ ಆಧಾರದ ಮೇಲೆ ನೇಮಿಸಿಕೊಂಡರು. ಅವರನ್ನು ಇದುವರೆಗೂ ಕನ್‌ಫರ್ಮ್ ಮಾಡಿಕೊಂಡಿಲ್ಲ. ೧೯೮೮ನೇ ಇಸವಿಯಲ್ಲಿ ಶ್ರೀ ಎ. ಕೃಷ್ಣಪ್ಪ ಮತ್ತು ಶ್ರೀ ಗುರುಪ್ರಸಾದ್ ರವರು ಈ ಸಭೆಯಲ್ಲಿ ಒಂದು ಪ್ರಶ್ನೆ ಹಾಕಿ ಈ ವಿಚಾರವನ್ನು ಪ್ರಸ್ತಾಪಿಸಿದಾಗ, ಆಗಿನ ಮುಖ್ಯ ಮಂತ್ರಿಗಳಾಗಿದ್ದ ಅವರು ಅದಕ್ಕೆ ಸಿ ಅಂಡ್ ಆರ್ ರೂಲ್ಸ್ ಅಮೆಂಡ್‌ಮೆಂಟ್ ಮಾಡಿದ ಮೇಲೆ ಇವರುಗಳನ್ನು ಪರ್‌ಮನೆಂಟ್ ಮಾಡುತ್ತೇವೆ ಎಂದು ಅಶ್ಯೂರೆನ್ಸ್ ಕೊಟ್ಟಿದ್ದರು. ಅದರ ಪ್ರತಿಯೂ ನನ್ನ ಬಳಿ

ಇದೆ. ಈಗ ಎರಡು ವರ್ಷಗಳ ಹಿಂದೆ ಈ ಭರವಸೆಕೊಟ್ಟ ಮೇಲೆ ೫೦೦ ರೂಪಾಯಿ ಸಂಬಳದವರಿಗೆ ೮೦೦ ರೂಪಾಯಿಗಳಾಯಿತು ೬೦೦ ರೂಪಾಯಿ ಇದ್ದವರಿಗೆ ೯೦೦ ರೂಪಾಯಿಗಳೂ ಆದವು. ಹೀಗೆ ೩೦೦ ರೂಪಾಯಿ ಜಾಸ್ತಿಯಾಯಿತು. ಆದೇ ಸಂಬಳದಲ್ಲಿ ಅವರುಗಳು ಮುಂದುವರಿದುಕೊಂಡು ಬಂದಿರುತ್ತಾರೆ. ಅವರಲ್ಲಿ ಅನೇಕರು ಮದುವೆ ಮಾಡಿಕೊಂಡವರಿದ್ದು ಸಂಸಾರಸ್ಥರು ಇದ್ದಾರೆ. ಬೆಂಗಳೂರಿನಲ್ಲಿ ಇಷ್ಟೊಂದು ಕಡಿಮೆ ಸಂಬಳತೆಗೆದುಕೊಂಡು ದಿನಗಳೆಯುವುದಕ್ಕೆ ಸಾಧ್ಯವೆ ? ಆದುದರಿಂದ ಅವರಿಗೆ ಸಿ ಅಂಡ್ ಆರ್ ರೂಲ್ಸ್‌ನ್ನು ಯಾವಾಗ ಅಪ್ಲೈ ಮಾಡುತ್ತೀರಿ. ಹಿಂದಿನ ಮಾನ್ಯ ಮುಖ್ಯಮಂತ್ರಿಗಳವರು ಹೇಳಿದ ಪ್ರಕಾರ ಅವರನ್ನು ಯಾವಾಗ ಖಾಯಂ ಗೊಳಿಸುತ್ತೀರಿ ಎಂಬ ಬಗ್ಗೆ ದಯವಿಟ್ಟು ತಿಳಿಸಬೇಕಂ.

ಶ್ರೀ ಎಂ. ರಾಜಶೇಖರಮೂರ್ತಿ.—ಈ ಬಗ್ಗೆ ಡ್ರಾಫ್ಟ್ ಸಿ ಅಂಡ್ ಆರ್ ರೂಲ್ಸ್ ಫೈನಲೈಸ್ ಆಗಿದೆ. ಅದು ಲಾ ಡಿಪಾರ್ಟ್‌ಮೆಂಟ್‌ಗೆ ಹೋಗಿದೆ. ಅದಾದಮೇಲೆ ಲೋಕಸೇವಾ ಆಯೋಗಕ್ಕೆ ಹೋಗಿ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು ಅದಾದ ನಂತರ ಕ್ಯಾಬಿನೆಟ್ ಮುಂದೆ ಬರಬೇಕು. ಅಲ್ಲಿ ಅಪ್ರೂವ್ ಆದಮೇಲೆ ೬೦ ಜನ ಕೋಡರ್ಸ್ ಮತ್ತು ೫೦ ಜನ ಜೂನಿಯರ್ ಆಪರೇಟರ್ಸ್ ಇನಿದ್ದಾರೆ ಅವರನ್ನು ನಿಯಮಾವಳಿಗಳಿಗನುಸಾರವಾಗಿ ಪರ್‌ಮನೆಂಟ್ ಮಾಡುತ್ತೇವೆ. ಅವರಿಗೆ ಸಿಗುತ್ತಿರುವ ಸಂಬಳ ಕಡಿಮೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಪ್ರಾರಂಭದಲ್ಲಿ ಅವರಿಗೆ ೨೦–೨೫ ರೂಪಾಯಿಗಳ ದಿನಗೂಲಿ ಇತ್ತು ಅದರ ಮೇಲೆ ಅವರು ಕೆಲಸ ಮಾಡಿದ್ದಾರೆ. ಈಗ ಕೋಡರ್ಸ್ ೮೦೦ ರೂಪಾಯಿಗಳನ್ನು, ಆಪರೇಟರ್ಸ್ ೯೦೦ ರೂಪಾಯಿಗಳನ್ನು ಪಡೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಸದ್ಯದಲ್ಲಿಯೇ ಈ ಬಗೆಗಿನ ಕೆಲಸವನ್ನು ಪೂರ್ತಿಗೊಳಿಸುತ್ತೇವೆ.

ಶ್ರೀ ಹೆಚ್. ಎಂ. ರೇವಣ್ಣ.—ಅಂದಿನ ಮುಖ್ಯಮಂತ್ರಿಯವರು ಕೊಟ್ಟ ಭರವಸೆಯ ಇಂದಿನ ವರೆಗೂ ಪರಿಶೀಲನೆ ಮಾಡುತ್ತೇವೆ ಎಂದು ಮುಂದುವರಿಯುತ್ತಾ ಇದೆಯೇ ಹೊರತು ಕಾರ್ಯಗತ ವಾಗಿಲ್ಲ. ಈಗೆಲ್ಲಾ 'ಉದ್ಭವಿಸುವುದಿಲ್ಲ' ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಒಂದು ನಿರ್ದಿಷ್ಟ ಸಮಯವನ್ನು ನಿಗದಿ ಮಾಡುತ್ತೀರಾ ?

ಅಧ್ಯಕ್ಷರು.—ಮಾನ್ಯ ಸಚಿವರು ಸೂಕ್ತ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ.

ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ವಿದ್ಯುತ್ ಕಡಿತ.

೧೪೧೫. ಶ್ರೀ ಎಸ್. ರಮೇಶ್ (ಉತ್ತರಹಳ್ಳಿ).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

(ಅ) ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ವಿದ್ಯುತ್ ಕಡಿತವನ್ನು ವಿಧಿಸಲಾಗಿದೆಯೇ ?

(ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳು ?

(ಇ) ಈ ಬಗ್ಗೆ ಸರ್ಕಾರವು ಮಾಡಿರುವ ಪರ್ಯಾಯ ವ್ಯವಸ್ಥೆಗಳಾವುವು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

(ಅ) ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ವಿದ್ಯುತ್ ಕಡಿತವನ್ನು ವಿಧಿಸಿಲ್ಲ.

(ಆ) ಮತ್ತು (ಇ) 'ಆ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್. ರಮೇಶ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಂಬಾ ಆಶ್ಚರ್ಯಪಡುವಂಥ ಉತ್ತರವನ್ನು ಕೊಟ್ಟಿದ್ದಾರೆ. ನಾನು ಬೌರಿಂಗ್ ಆಸ್ಪತ್ರೆಯಲ್ಲಿ ರೋಗಿಯಾಗಿ ೨೬ ದಿವಸಗಳ ಕಾಲ ವಿಐಪಿ ವಾರ್ಡ್‌ನಲ್ಲಿ ಇದ್ದೆ. ಇಲ್ಲಿ ಆಪರೇಷನ್ ಮಾಡುವಂಥ ಕಾಲದಲ್ಲಿ ಏನಾದರೂ ಕರೆಂಟ್ ಹೋಗಿ ಬಿಟ್ಟಿತು ಅಂದರೆ ವಾರ್ಡ್‌ಬಾಯ್ ಓಡಿ ಹೋಗಿ ಜನರೇಟರ್‌ಗೆ ಹೇಳಿ ಬರಬೇಕು. ವಿಐಪಿ ವಾರ್ಡ್‌ನಲ್ಲಿಯೇ ಈ ರೀತಿ ಇರಬೇಕಾದರೆ ಇನ್ನು ಜನರಲ್ ವಾರ್ಡ್‌ಗಳ ಪರಿಸ್ಥಿತಿ ಹೇಗೆ ಇರಬಹುದು ಎಂದು ಊಹಿಸಿಕೊಳ್ಳಬೇಕಾಗುತ್ತದೆ. ನಾವು ಆ ವಾರ್ಡ್‌ಗಳಿಗೆ ಹೋದಾಗ ಅಲ್ಲಿ ಪೇಶೆಂಟ್ಸ್ ನಮ್ಮನ್ನು ಕುರಿತು ಹೇಳುತ್ತಾ ಇದ್ದರು, ರಾಜ್ಯದಲ್ಲಿ ಸರಕಾರ ಇದೆಯೋ ಇಲ್ಲವೋ ಎಂಬ ಬಗ್ಗೆ ಶಂಕೆ ವ್ಯಕ್ತಪಡಿಸುತ್ತಿದ್ದರು ಮತ್ತು ಹೊಸ ಸರಕಾರ ಬಂದ ಫೀಲಿಂಗ್ಸ್ ಕೂಡ ಆಗುತ್ತಾ ಇಲ್ಲ ಎಂಬ ಟೀಕೆ ಮಾಡುತ್ತಾ ಇದ್ದರು. ಬೌರಿಂಗ್ ಆಸ್ಪತ್ರೆಯಲ್ಲಿ ದಿನವೂ ಒಂದೆರಡು ಗಂಟೆಗಳ ಕಾಲ ಕರೆಂಟ್ ಹೋಗುತ್ತಾ